

# ಸಿಕ್ಸರ್‌ಗಳ ಸರದಾರ!

ವಾಟ್ಸನ್‌ಗೆ ಅವತ್ತು ರನ್‌ಗಳ ದಾಹ ಎಷ್ಟಿತ್ತೊ ಏನೋ? ಬಾಂಗ್ಲಾದೇಶ ಬೌಲರ್‌ಗಳನ್ನು ಹಿಗ್ಗಾಮುಗ್ಗಾ ಚಚ್ಚಿದರು. ಆ ಪಂದ್ಯದಲ್ಲಿ ಅವರು ಅಕ್ಷರಶಃ ಚಂಡಮಾರುತವಾಗಿದ್ದರು. ಕ್ರೀಸ್ ಬಿಟ್ಟು ಮುಂದೆ ಬಂದರೆ ಅಲ್ಲೊಂದು ಸಿಕ್ಸರ್! ಆಧುನಿಕ ಕ್ರಿಕೆಟ್‌ನ ಅತ್ಯುತ್ತಮ ಆಲ್‌ರೌಂಡರ್‌ಗಳಲ್ಲಿ ಒಬ್ಬರು ಆಸ್ಟ್ರೇಲಿಯಾದ ಈ ವಾಟ್ಸನ್.

■ ಕೆ.ಓಂಕಾರ ಮೂರ್ತಿ

**ಅದ್ಭುತ, ಅಪೂರ್ವ, ಅಮೋಘ!**

ಅವತ್ತು ಢಾಕಾದ ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ಶೇನ್ ವಾಟ್ಸನ್ ಅಬ್ಬರಿಸಿದ ಕ್ಷಣವನ್ನು ಯಾವ ರೀತಿ ವರ್ಣಿಸಬಹುದು ಹೇಳಿ?

ಭಾರತವಿಡೀ ಐಪಿಎಲ ಗುಂಗಿನಲ್ಲಿ ಮುಳುಗಿದ್ದಾಗ ವಾಟ್ಸನ್ ಅವರ ಬ್ಯಾಟ್‌ನಿಂದ ಅದ್ಭುತ ಇನಿಂಗ್ಸ್‌ವೊಂದು ಸೃಷ್ಟಿಯಾಗಿತ್ತು. ಅದೊಂದು ಮಾಸ್ಟರ್ ಸ್ಟ್ರೋಕ್! ಅಲ್ಲಿ ಅವರು ಅಕ್ಷರಶಃ ಮಿಂಚು ಹರಿಸಿದರು. ಕ್ರೀಸ್ ಬಿಟ್ಟು ಮುಂದೆ ಬಂದರೆ ಅಲ್ಲೊಂದು ಸಿಕ್ಸರ್!

ಬಾಂಗ್ಲಾದೇಶದ ಬೌಲರ್‌ಗಳು ಆ ಕ್ಷಣವನ್ನು ಜೀವನವಿಡೀ ನೆನಪಿನಲ್ಲಿಟ್ಟುಕೊಳ್ಳಬೇಕು, ಕನಸಿನಲ್ಲೂ ಕನವರಿಸಬೇಕು! ಅಂಥ ಆಟವದು.

ಕಾರಣ ವಾಟ್ಸನ್ ಅಂದು ಎತ್ತಿದ್ದು ಬರೋಬ್ಬರಿ 15 ಸಿಕ್ಸರ್. ಒಂದೇ ಪಂದ್ಯದಲ್ಲಿ ಅಷ್ಟೊಂದು ಸಿಕ್ಸರ್ ಹೊಡೆದದ್ದು ವಿಶ್ವ ದಾಖಲೆ ಕೂಡ. ಅಷ್ಟರಲ್ಲಿ ವೆಸ್ಟ್ ಇಂಡೀಸ್‌ನ ಕ್ಸೇವಿಯರ್ ಮಾರ್ಷಲ್ (12 ಸಿಕ್ಸರ್) ಅವರ ವಿಶ್ವ ದಾಖಲೆ ಅಳಿಸಿ ಹೋಗಿತ್ತು. ಕ್ಸೇವಿಯರ್ 2008ರಲ್ಲಿ ಕೆನಡಾ ವಿರುದ್ಧ ಈ ದಾಖಲೆ ನಿರ್ಮಿಸಿದ್ದರು.

ಆ ಏಕದಿನ ಪಂದ್ಯದಲ್ಲಿ ಆಸ್ಟ್ರೇಲಿಯಾದ ಈ ಆಲ್‌ರೌಂಡರ್ ಔಟಾಗದೆ 185 ರನ್ ಬಾರಿಸಿದರು. ಅಷ್ಟು ರನ್ ಬಂದಿದ್ದು ಕೇವಲ 96 ಎಸೆತಗಳಲ್ಲಿ ಎನ್ನುವುದು ವಿಶೇಷ. ಜೊತೆಗೆ ಒಂದಕ್ಕಿಂತ ಒಂದು ಚೆಂದದ 15 ಬೌಂಡರಿಗಳಿದ್ದವು.

ಕ್ವೀನ್ಸ್‌ಲ್ಯಾಂಡ್‌ನ ವಾಟ್ಸನ್ ಸಮಕಾಲೀನ ಶ್ರೇಷ್ಠ ಆಲ್‌ರೌಂಡರ್‌ಗಳಲ್ಲಿ ಒಬ್ಬರು. ಸದ್ಯ ಐಸಿಸಿ ಆಲ್‌ರೌಂಡರ್‌ಗಳ ಪಟ್ಟಿಯಲ್ಲಿ ಅಗ್ರ ರ್‍ಯಾಂಕ್ ಹೊಂದಿದ್ದಾರೆ. 133 ಏಕದಿನ ಪಂದ್ಯಗಳಿಂದ ಅವರು 43.74 ಸರಾಸರಿಯಲ್ಲಿ 3937 ರನ್ ಹಾಗೂ 133 ವಿಕೆಟ್ ಪಡೆದಿರುವುದೇ ಅದಕ್ಕೆ ಸಾಕ್ಷಿ. ಅದರಲ್ಲಿ ಆರು ಶತಕಗಳು ಸೇರಿವೆ.

29 ವರ್ಷ ವಯಸ್ಸಿನ ಶೇನ್ ವಾಟ್ಸನ್ ಎರಡು ವರ್ಷಗಳಿಂದ ಅದ್ಭುತ ಫಾರ್ಮ್‌ನಲ್ಲಿದ್ದಾರೆ. ಹಾಗಾಗಿ ಅವರಿಗೆ 2010 ಹಾಗೂ 2011ರಲ್ಲಿ ಅಲನ್ ಬಾರ್ಡರ್ ಪದಕ ಲಭಿಸಿತ್ತು. ರಿಕಿ ಪಾಂಟಿಂಗ್ ಬಳಿಕ ಎರಡು ಬಾರಿ ಈ ಪದಕ ಪಡೆದ ಆಟಗಾರ ಅವರು. 2002ರಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅವರನ್ನು ಗಾಯದ ಸಮಸ್ಯೆ ಕಾಡಿದ ಪರಿ ಅಷ್ಟಿಷ್ಟಲ್ಲ. ಅದಕ್ಕಾಗಿ ಅವರು ತಮ್ಮ ಅಭ್ಯಾಸದ ವೈಖರಿಯನ್ನೇ ಬದಲಾಯಿಸಿಕೊಳ್ಳಬೇಕಾಯಿತು. ದೇಹದ ತೂಕ ಇಳಿಸಿಕೊಳ್ಳಬೇಕಾಯಿತು. ಕ್ರಿಕೆಟ್‌ನಲ್ಲಿ ಅಂದುಕೊಂಡಿದ್ದನ್ನು ಸಾಧಿಸಲು ಕುಡಿತಕ್ಕೆ ಗುಡ್‌ಬೈ ಹೇಳಿದರು. ಅದು ಅವರ ಜೀವನದ 'ಟರ್ನಿಂಗ್ ಪಾಯಿಂಟ್' ಕೂಡಾ.

ಈ ಬಾರಿ ಅವರು ವರ್ಷದ ಶ್ರೇಷ್ಠ ಟೆಸ್ಟ್ ಹಾಗೂ ಏಕದಿನ ಆಟಗಾರ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಆಡಿರುವ 27 ಟೆಸ್ಟ್ ಪಂದ್ಯಗಳಿಂದ 1953 ರನ್ ಗಳಿಸಿದ್ದಾರೆ. ಎರಡು ಶತಕ ಅದರಲ್ಲಿವೆ. ವಾಟ್ಸನ್ ಪತ್ನಿ ಲೀ ಫರ್ಲಾಂಗ್ 'ಫಾಕ್ಸ್ ಸ್ಪೋರ್ಟ್ಸ್ ಆಸ್ಟ್ರೇಲಿಯಾ' ಟಿ.ವಿ.ಯ ನಿರೂಪಕಿ. 2010ರ ಜೂನ್‌ನಲ್ಲಿ ಅವರು ಮದುವೆಯಾಗಿದ್ದರು.

ಬಾಂಗ್ಲಾದೇಶ ವಿರುದ್ಧದ ಏಕದಿನ ಸರಣಿ ಬಳಿಕ ಶೇನ್ ವಾಟ್ಸನ್ ಐಪಿಎಲ್ ಟೂರ್ನಿಯಲ್ಲಿ ರಾಜಸ್ಥಾನ ರಾಯಲ್ಸ್ ತಂಡದಲ್ಲಿ ಆಡಲು ಭಾರತಕ್ಕೆ ಆಗಮಿಸಿದ್ದಾರೆ. ಅವರ ಬ್ಯಾಟ್‌ನಿಂದ ಚುಟುಕು ಕ್ರಿಕೆಟ್‌ನಲ್ಲಿ ಮತ್ತೆಷ್ಟು ಸಿಕ್ಸರ್‌ಗಳು ಸಿಡಿಯುತ್ತವೆಯೊ ಏನೋ? ■